# ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ

ಮತ್ತು

# ಜನತಾ ವಿದ್ಯಾಲಯ, ಮಿರ್ಜಾನ-ಕೋಡ್ಕಣಿ

ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ



## ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ
## ಸಂಸ್ಕೃತ ಸೌರಭ ಕಾರ್ಯಕ್ರಮ

ದಿನಾಂಕ: **12ನೇ ಡಿಸೆಂಬರ್ 2014** ಸಮಯ: **11.00 ರಿಂದ 2.00**

ಸ್ಥಳ: **ಕೆನಡಿ ಸಭಾಭವನ, ಜನತಾ ವಿದ್ಯಾಲಯ, ಮಿರ್ಜಾನ-ಕೋಡ್ಕಣಿ**

## ಒಂದು ವರದಿ

# ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ

ಕೆನರಾ ವೆಲ್‌ಫೇರ್ ಟ್ರಸ್ಟ್ ಅಂಕೋಲಾ ಹಾಗೂ ಜನತಾ ವಿದ್ಯಾಲಯ ಮಿರ್ಜಾನ್–ಕೋಡ್ಕಣಿ ಇವುಗಳ ಸಂಯುಕ್ತ ಆಶ್ರಯದಲ್ಲಿದಿ. ಗಣಪತಿ ಅಣ್ಣಪ್ಪಯ್ಯ ಪೈ ಅವರ ನೆನಪಿಗಾಗಿ ಕಳೆದ ದಿನಾಂಕ 12–12–2014ರಂದು ಸಂಸ್ಕೃತ ಸೌರಭ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.





ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಅಂಕೋಲಾ ಜಿ.ಸಿ. ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಡಾ॥ ಎಸ್.ಎನ್.ಭಟ್ಟ ಅವರು ಮಹಾಕವಿ ಕಾಳಿದಾಸನ ಜೀವನ ಹಾಗೂ ಕೃತಿಗಳನ್ನು ಕುರಿತು ಉದ್ಬೋಧಕವಾದ ಉಪನ್ಯಾಸ ನೀಡಿದರು. ಸಂಸ್ಕೃತದಲ್ಲಿ ವಿನೂತನವಾದ ನಾಟಕ ಪರಂಪರೆಯನ್ನು ಹುಟ್ಟುಹಾಕಿದ ಕಾಳಿದಾಸನು ಭಾರತದ ಶೇಕ್ಸ್‌ಪಿಯರ್ ಎಂಬ ಬಿರುದಿಗೆ ಪಾತ್ರನಾಗಿದ್ದಾನೆ. ಅವನ ಮಹಾಕಾವ್ಯಗಳು ಹಾಗೂ ನಾಟಕಗಳು ಮುಂದಿನ ಕವಿಗಳಿಗೆ ಸ್ಫೂರ್ತಿಯ ಸೆಲೆಯಾದವು. ಇಷ್ಟಾದರೂ ಕೀರ್ತಿಗಾಗಿ ಎಂದೂ ಪರಿತಪಿಸದ ಕಾಳಿದಾಸ ತನ್ನ ಕೃತಿಗಳಲ್ಲಿ ತನ್ನ ವ್ಯಕ್ತಿತ್ವದ ಕುರಿತು ಏನೊಂದೂ ಹೇಳಿಕೊಳ್ಳದಷ್ಟು ನಿರ್ಲಿಪ್ತ ಮನೋಭಾವದವನಾಗಿದ್ದನು ಎಂದು ಅಭಿಪ್ರಾಯಪಟ್ಟರು.






ಕೆನರಾ ವೆಲ್‌ಫೇರ್ ಟ್ರಸ್ಟಿನ ಆಡಳಿತಾಧಿಕಾರಿಗಳಾದ ಶ್ರೀ ಕೃಷ್ಣಾನಂದ ವಿ.ಶೆಟ್ಟಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ದಿ. ಗಣಪತಿ ಅಣ್ಣಪ್ಪಯ್ಯ ಪೈ ಹಾಗೂ ಟ್ರಸ್ಟಿನ ಸಂಬಂಧವನ್ನು ವಿವರಿಸಿದರು. ಸಂಸ್ಕೃತ ಸೌರಭಕಾರ್ಯಕ್ರಮವನ್ನು ಪ್ರತಿವರ್ಷ ಆಚರಿಸುವುದರ ಹಿಂದೆ ಪೈ ಅವರನ್ನು ಸ್ಮರಿಸಿಕೊಳ್ಳುವ ಉದ್ದೇಶವೊಂದೇ ಅಲ್ಲದೆ ಅವಜ್ಞೆಗೆತುತ್ತಾಗುತ್ತಿರುವ ಸಂಸ್ಕೃತ ಭಾಷೆಯಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶವೂ ಅಡಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪಿ.ಎಂ. ಹೈಸ್ಕೂಲಿನ ಶಿಕ್ಷಕ ಶ್ರೀ ನಾಗಪತಿ ಹೆಗಡೆಯವರು ಶ್ರೀಮದ್ಭಗವದ್ಗೀತೆಯು ಮನುಷ್ಯನ ಮನಸ್ಸಿನ ಎಲ್ಲ ಕಲ್ಮಷಗಳನ್ನು ತೊಡೆದು ಹಾಕುವ ಸಾಮರ್ಥ್ಯ ಹೊಂದಿದೆ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಅಡಗಿರುವ ಮನಃಕ್ಲೇಶವನ್ನುದೂರ ಮಾಡುವ ಭಗವದ್ಗೀತೆಯನ್ನು ಎಲ್ಲರೂ ಪಠಿಸಿ ತಮ್ಮ ಮನೋವ್ಯಾಕುಲತೆಯಿಂದ ಮುಕ್ತರಾಗಬಹುದೆಂದು ತಿಳಿಸಿದರು.








ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜನತಾ ವಿದ್ಯಾಲಯ ಮಿರ್ಜಾನ್–ಕೋಡ್ಕಣಿಯ ಮುಖ್ಯಾಧ್ಯಾಪಕ ಶ್ರೀ ಎಲ್.ವಿ. ಭಟ್ಟ ಅವರು ಎಲ್ಲ ವಿದ್ಯಾರ್ಥಿಗಳೂ ಸಂಸ್ಕೃತ ಭಾಷೆ ಹಾಗೂ ಭಗವದ್ಗೀತೆಯ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಭಗವದ್ಗೀತೆಯ ಪಠಣ ಹಾಗೂ ಭಗವದ್ಗೀತೆಯನ್ನು ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧಾ ವಿಜೇತರಿಗೆಗಣ್ಯ ಅತಿಥಿಗಳು ಬಹುಮಾನಗಳನ್ನು ವಿತರಿಸಿದರು. ಶಾಲೆಯ ವಿದ್ಯಾರ್ಥಿಗಳು ಕಾರ್ಯಕ್ರಮದ ಆರಂಭದಲ್ಲಿ ಪ್ರಾರ್ಥಿಸಿ, ನಂತರ ಭಗವದ್ಗೀತೆಯ ಪಠಣ ಮಾಡಿದರು. ಶಾಲೆಯ ಅಧ್ಯಾಪಕರಾದ ಶ್ರೀ ರಾಜು ನಾಯ್ಕ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಎಸ್.ಕೆ.ನಾಯ್ಕ ಅವರು ವಂದಿಸಿದರು. ಕೆನರಾ ವೆಲ್‌ಫೇರ್ ಟ್ರಸ್ಟಿನ ಸಂಚಾಲಕರಾದ ಶ್ರೀ ಪ್ರಶಾಂತ ರಾವ್ ಹಾಗೂ ಶ್ರೀ ರಾಜು ನಾಯ್ಕ ಇವರು ಸಹಕರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿಗಳನ್ನು ನೀಡಲಾಯಿತು.